

ಕೊರೊನಾ ಕಾಲದಲ್ಲಿ ಸೊರಗಿ ಹೋಗಿದ್ದ ಫ್ಯಾಷನ್ ಜಗತ್ತಿನಲ್ಲಿ ಈಗ ಹೊಸ ಹುರುಪು ಬಂದಿದೆ. ಮನೆಯೊಳಗೆ ಬಂಧಿಯಾಗಿದ್ದ ಫ್ಯಾಷನ್‌ಪ್ರಿಯರು ಇದೀಗ ಹೊಸ ಟ್ರೆಂಡ್‌ನತ್ತ ಮುಖ ಮಾಡಲಾರಂಭಿಸಿದ್ದಾರೆ.

■ ಸುಮನಾ ಜಿ. ಪ್ರಸಾದ್

# ಫ್ಯಾಷನ್‌ನಲ್ಲಿ ಫ್ಯೂಷನ್!

## ಕೊರೊನಾ ನಂತರದ ಫ್ಯಾಷನ್ ಜಗತ್ತು

ಫ್ಯಾಷನ್ ಎಂದರೆ ಹೊಸತನ, ಟ್ರೆಂಡ್. ಕೆಲವರಿಗೆ ಇದೊಂದು ಪ್ಯಾಷನ್, ಇನ್ನು ಕೆಲವರಿಗೆ ಕ್ರೇಜ್ ಮತ್ತೂ ಕೆಲವರಿಗೆ ಗ್ಲ್ಯಾಮರಸ್ ಲುಕ್ ಪಡೆವ ತುಡಿತ. ಡ್ರೆಸ್, ಜ್ಯುವೆಲರಿ, ಆ್ಯಕ್ಸೆಸರಿ, ಚಪ್ಪಲಿ.. ಹೀಗೆ ಫ್ಯಾಷನ್ ಆವರಿಸಿಕೊಳ್ಳುವ ಕ್ಷೇತ್ರವಿದು. ಮಾಡೆಲಿಂಗ್ ಕ್ಷೇತ್ರದ ತಾರೆಯರು ರ್‍ಯಾಂಪ್ ಮೇಲೆ ತೊಟ್ಟ ಉಡುಪು, ಸಿನಿ ನಟಿಯರು ತೆರೆಯ ಮೇಲೆ ಹಾಕಿಕೊಂಡು ಮೆರೆದ ಒಡವೆ, ಮದುಮಗಳು ಉಟ್ಟ ಸೀರೆ.. ಎಲ್ಲವೂ ಫ್ಯಾಷನ್ ಮೊದಲ ಬಾರಿಗೆ ಜನ್ಮತಳೆಯುವ ತಾಣಗಳು.

ತಳುಕು ಬಳುಕನ್ನು ಬಯಸುವ ಫ್ಯಾಷನ್ ಜಗತ್ತಿನಲ್ಲಿ ಗ್ಲ್ಯಾಮರ್‌ಗೆ ಅಗ್ರಮಣೆ. ಹೊಸತನಕ್ಕೆ ಮೊದಲ ಆದ್ಯತೆ, ಫ್ಯಾಷನಬಲ್ ಲುಕ್‌ಗೆ ಪ್ರಥಮ ಪ್ರಾಶಸ್ತ್ಯ. ಉಡುಪು, ಒಡವೆ, ಕೇಶಶೈಲಿ, ಆಕ್ಸೆಸರಿ, ಚಪ್ಪಲಿ... ಎಲ್ಲೆಲ್ಲೂ ಫ್ಯಾಷನ್‌ನದೇ ಹೊಳಪು, ವಿಶಿಷ್ಟ ಛಾಪು. ಸೀರೆಯಲ್ಲೂ ಫ್ಯಾಷನ್‌ನದ್ದೇ ಬೆರಗು, ಸಲ್ವಾರ್‌ನಲ್ಲೂ ಅದೇ ಸೊಬಗು. ಹಿಂದಿನ ಫ್ಯಾಷನ್ ಮತ್ತೆ ಜೀವಂತ. ಕಳೆದು ಹೋಗಿದ್ದ, ಮೂಲೆ ಸೇರಿದ್ದ, ಹಳತಾಗಿದ್ದ ಫ್ಯಾಷನ್ ಎಲ್ಲವೂ ಮತ್ತೆ ಹೊಸರೂಪ, ಹೊಸ ಜೀವ, ಹೊಸ ವಿನ್ಯಾಸದೊಂದಿಗೆ ಬಂದಿದೆ, ಬರುತ್ತಲೇ ಇದೆ. ಫ್ಯಾಷನ್‌ನಲ್ಲೂ ಫ್ಯೂಷನ್ ಉಡುಗೆಗಳು ಜನಪ್ರಿಯವಾಗುತ್ತಿವೆ.